ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು

PAPER CLIPPINGS

ಇಲಾಖೆ / ವಿಷಯ: DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER :

ದಿನಾಂಕ : DATE : 2/11/2019

# ಐದು ಹಂತಗಳಲ್ಲಿ ಜಾರ್ಖಂಡ್ ಚುನಾವಣೆ

## ನ. 30ರಿಂದ ಮತದಾನ | ಡಿ.23ಕ್ಕೆ ಫಲಿತಾಂಶ

ನವದೆಹಲಿ: ಇದೇ ತಿಂಗಳ 30ರಿಂದ ಜಾರ್ಖಂಡ್ ವಿಧಾನಸಭೆಗೆ ಐದು ಹಂತಗಳಲ್ಲಿ ಚುನಾವಣೆ ನಡೆಯಲಿದೆ. ಡಿಸೆಂಬರ್ 23ಕ್ಕೆ ಫಲಿತಾಂಶ ಪ್ರಕಟವಾಗಲಿದೆ.

ಕೇಂದ್ರ ಚುನಾವಣಾ ಕಚೇರಿಯಲ್ಲಿ ಪತ್ರಿಕಾಗೋಷ್ಠಿ ನಡೆಸಿದ ಮುಖ್ಯ ಆಯುಕ್ತ ಸುನಿಲ್ ಅರೋರಾ, ವಿಧಾನಸಭೆ ಚುನಾವಣೆ ವೇಳಾಪಟ್ಟಿ ಪ್ರಕಟಿಸಿದ್ದಾರೆ. ಈ ರಾಜ್ಯದಲ್ಲಿ ಅಧಿಕಾರದಲ್ಲಿರುವ ಬಿಜೆಪಿ ಸರ್ಕಾರದ ಅವಧಿ, 2020ರ ಜ.5ರಂದು ಕೊನೆಗೊಳ್ಳಲಿರುವ ಹಿನ್ನೆಲೆಯಲ್ಲಿ ಚುನಾವಣೆ ಘೋಷಿಸಲಾಗಿದೆ.

ನಕ್ಸಲ್ ಪೀಡಿತ ರಾಜ್ಯವಾಗಿರುವುದರಿಂದ ಬಿಗಿಭದ್ರತೆಯನ್ನು ಗಮನದಲ್ಲಿಟ್ಟುಕೊಂಡು ಐದು ಹಂತಗಳಲ್ಲಿ ಚುನಾವಣೆ ನಡೆಸಲು ನಿರ್ಧರಿಸಲಾಗಿದೆ. ನ.30ರಂದು ಮೊದಲ ಹಂತದ ಮತದಾನ ನಡೆಯಲಿದ್ದು, ಉಳಿದ ನಾಲ್ಕು ಹಂತಗಳ ಮತದಾನ, ಡಿ.7, 12, 16 ಹಾಗೂ 20ರಂದು ನಡೆಯಲಿದೆ. ಡಿ.23ರಂದು ಫಲಿತಾಂಶ ಹೊರಬೀಳಲಿದೆ. 81 ಸದಸ್ಯ ಬಲದ ವಿಧಾನಸಭೆಗೆ 2014ರಲ್ಲಿ ನಡೆದಿದ್ದ ಚುನಾವಣೆಯಲ್ಲೂ ಐದು ಹಂತಗಳ ಮತದಾನ ನಡೆಸಲಾಗಿತ್ತು. ಸದ್ಯ 37 ಸ್ಥಾನಗಳನ್ನು ಪಡೆದುಕೊಂಡಿರುವ ಬಿಜೆಪಿ ಅಧಿಕಾರದಲ್ಲಿದೆ. ಶಿಬುಸೋರೆನ್ ನೇತೃತ್ವದ ಜೆಎಂಎಂ 19 ಸ್ಥಾನ, ಮಾಜಿ ಮುಖ್ಯಮಂತ್ರಿ ಬಾಬುಲಾಲ್ ಮುರಂಡಿ ಅವರ ಜಾರ್ಖಂಡ್ ವಿಕಾಸ್ ಮೋರ್ಚಾ(ಪ್ರಜಾತಾಂತ್ರಿಕ) ಎಂಟರಲ್ಲಿ ಗೆದ್ದಿತ್ತು. ಇವರಲ್ಲಿ ಆರು ಮಂದಿ 2015ರಲ್ಲಿ ಬಿಜೆಪಿಗೆ ಸೇರಿದ್ದರು. ಕಾಂಗ್ರೆಸ್ 7 ಸ್ಥಾನಗಳಲ್ಲಿ ಜಯಗಳಿಸಿತ್ತು. ಎಜೆಎಸ್‌ಯು 5ರಲ್ಲಿ, ಸಣ್ಣಪುಟ್ಟ ಪಕ್ಷಗಳು ಐದರಲ್ಲಿ ಗೆದ್ದಿದ್ದವು.



**ಯಾವಾಗ ಎಷ್ಟು?**

| | | |
|---|---|---|
| ಮೊದಲ ಹಂತ: | ನ.30 | 13 ಕ್ಷೇತ್ರ |
| 2ನೇ ಹಂತ: | ಡಿ.7 | 20 ಕ್ಷೇತ್ರ |
| 3ನೇ ಹಂತ: | ಡಿ.12 | 17 ಕ್ಷೇತ್ರ |
| 4ನೇ ಹಂತ: | ಡಿ.16 | 15 ಕ್ಷೇತ್ರ |
| 5ನೇ ಹಂತ: | ಡಿ.20 | 16 ಕ್ಷೇತ್ರ |

6